

(8ನೇ ಪುಟದಿಂದ)
ಶಿವನಸಮುದ್ರ ಜಲಧಾರೆಯ ಮುಂದೆ ನಿಂತು ಕಣ್ತೆರೆದರೆ ಹತ್ತುಹಲವು ರೂಪಗಳಲ್ಲಿ ಅನಾವರಣಗೊಳ್ಳುವ ಕಾವೇರಿಯ ಸೌಂದರ್ಯ ಅಪ್ರತಿಮ. ಜಲಧಾರೆಗಳ ಆಗರ ಶಿವನಸಮುದ್ರದಲ್ಲಿ ಪ್ರತಿಕ್ಷಣ ನವನೀತಳಾಗಿ ಅವತರಿಸುವ ಕಾವೇರಿಯ ಸೌಂದರ್ಯವನ್ನು ಆಸ್ವಾದಿಸುತ್ತಿದ್ದರೆ ಸಮಯ ಸರಿದಿದ್ದೇ ಅರಿವಾಗುವುದಿಲ್ಲ. ಸರಿಸುಮಾರು 850 ಮೀಟರ್ ಅಗಲ ಪ್ರದೇಶದಲ್ಲಿ ಹತ್ತು ಹಲವು ಕವಲೊಡೆದು ಸುಮಾರು 300 ಅಡಿ ಆಳಕ್ಕೆ ಭೋರ್ಗರೆಯುತ್ತ ಧುಮ್ಮಿಕ್ಕುವ ದೃಶ್ಯ ಆನಂದದ ಜೊತೆಗೆ ಸಣ್ಣಗೆ ಭಯವನ್ನೂ, ತಣ್ಣನೆ ನಡುಕವನ್ನೂ ಹುಟ್ಟಿಸುತ್ತದೆ. ರಸ್ತೆ ಮೂಲಕ ಕೇವಲ 8 ಕಿ.ಮೀ ಅಂತರದಲ್ಲಿರುವ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳು ಸೌಂದರ್ಯ ಸ್ಪರ್ಧೆಗಿಳಿದಿರುವಂತೆ ಪರಸ್ಪರ ಸೊಬಗನ್ನು ಮೀರಿ ನಿಲ್ಲುತ್ತವೆ. ಭರಚುಕ್ಕಿ ಜಲಪಾತಕ್ಕೆ ಒಂದು ಕಿ.ಮೀ ಮುನ್ನ ಎಡಕ್ಕೆ ಸಿಗುವ ಹಜ್ರತ್ ಮರ್ದಾನೆ ಗಾಯಿಬ್ ದರ್ಗಾ ಬಳಿ ಗಗನಚುಕ್ಕಿ ಜಲಪಾತ ಬೇರೆಯದೇ ರೂಪದಲ್ಲಿ ಕಾಣಿಸುತ್ತದೆ. ಕಳೆದ ಹಲವು ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದ ನೀರಿನ ಪ್ರಮಾಣ ಹೆಚ್ಚಿ ಜಲಪಾತಗಳ ಸೌಂದರ್ಯ ಇಮ್ಮಡಿಸಿದೆ.

ಮಂಡ್ಯ ಜಿಲ್ಲೆಗೆ ಸೇರಿದ ಶಿವನಸಮುದ್ರಕ್ಕೆ ಮೈಸೂರು – ಮಳವಳ್ಳಿ ಮಾರ್ಗವಾಗಿ 60 ಕಿ.ಮೀ ಬೆಂಗಳೂರಿನಿಂದ 140 ಕಿ.ಮೀ ಪ್ರವಾಸಿಗರು ಖಾಸಗಿ ವಾಹನಗಳಲ್ಲಿ ಬಂದರೆ ಸೌಂದರ್ಯಾಸ್ವಾದನೆಗೆ ಹೆಚ್ಚು ಕಾಲಾವಕಾಶವಾಗುವುದು.